Price : Rs. 2=00 Date of publication 15th of every month Date of posting 20th of every month

# ನವಿ ಮುಂಬಯಿ ಕನ್ನಡ ಸಂಕಲನ

ಸಂಪುಟ ೧೭ ಸಂಚಿಕೆ ೨-೩ ಜೂನ-ಜೂಲೈ ೨೦೧೫

**ನವಿ ಮುಂಬಯಿ**
**ಕನ್ನಡ ಸಂಘದ ಮುಖಪತ್ರ**

**ಸಂಪಾದಕ ಮಂಡಳಿ**
ಶ್ರೀ ಬಿ.ಎಚ್. ಕಟ್ಟಿ
ಶ್ರೀ ಶ್ರೀಧರ ಮೈಸೂರ
ಪ್ರಭಾಕರ ಎಸ್. ದೇವಾಡಿಗ

**ಕಾರ್ಯ ನಿರ್ವಾಹಕರು**
ಗೌರವಾಧ್ಯಕ್ಷರು

**ಅಧ್ಯಕ್ಷರು**
ಶ್ರೀ ಬಿ. ಎಚ್. ಕಟ್ಟಿ

**ಉಪಾಧ್ಯಕ್ಷರು**
ಶ್ರೀ ಗೋಪಾಲ್ ವೈ. ಶೆಟ್ಟಿ
ಶ್ರೀ ಬಿ. ಎಲ್. ಎಲ್.ಮೂರ್ತಿ
ಶ್ರೀಮತಿ ಸವಿತಾ ಎಚ್ ನಾಯಕ್
ಶ್ರೀ ವೈ. ಕೆ. ರಾವ್

**ಕಾರ್ಯದರ್ಶಿ**
ಶ್ರೀಮತಿ ಸುಜಾತಾ ರಾವ್

**ಜತೆ ಕಾರ್ಯದರ್ಶಿ**
ಶ್ರೀಮತಿ ವಸಂತಿ ಕರ್ಕೇರ

**ಕೋಶಾಧಿಕಾರಿ**
ಶ್ರೀ ಜಯಾ ಶೆಟ್ಟಿ

**ಪ್ರಕಾಶಕರು**
ನವಿ ಮುಂಬಯಿಕನ್ನಡ ಸಂಘ
ಪ್ಲಾಟ್ ನಂ.೨ ಸಿ / ೨
ಸೆಕ್ಟರ್ ನಂ. ೯ ಎ, ವಾಶಿ.
ನವಿ ಮುಂಬಯಿ-೪೦೦೭೦೩.
ದೂರವಾಣಿ : 27653443

## ಅರವತ್ತೈದರ ಯುದ್ಧಕ್ಕೆ ಐವತ್ತು ವರುಷ

೧೯೬೫ ರಲ್ಲಿ ಭಾರತ ಮತ್ತು ಪಾಕಿಸ್ತನಗಳ ಮಧ್ಯ ಮೊದಲನೇ ಯುಧ್ದವಾಯಿತು. ಅದರಲ್ಲಿ ಯಾರಿಗೆ ಜಯವಯಿತು, ಯಾರಿಗೆ ಸೋಲಾಯಿತು ಇದು ಒಂದು ಪ್ರಶ್ನಾರ್ಥಕ ಚಿಹ್ನೆಯಾಗಿ ಉಳದಿದೆ. ಎರಡೂ ರಾಷ್ಟ್ರಗಳು ತಾವು ಜಯಿಸಿದೆವು ಎಂದು ಹೇಳುತ್ತವೆ. ಆದರೆ ಎರಡು ರಾಷ್ಟ್ರಗಳಲ್ಲಿ ಯಾರೂ ಗೆಲ್ಲಲಿಲ್ಲ ಮತ್ತು ಯಾರೂ ಸೋಲಲಿಲ್ಲ. ಕೆಲವು ಪ್ರದೇಶಗಳಲ್ಲಿ ಪಾಕಿಸ್ತಾನದ ಮೇಲ್ಮೈಯಾದರೆ ಇನ್ನು ಕೆಲವು ಪ್ರದೇಶಗಳಲ್ಲಿ ಭಾರತದ ಮೇಲ್ಮೈ. ಅಂತೂ ರಷಿಯದ ಮದ್ಯಸ್ತಿಕೆಯಿಂದ ಯುಧ್ದ ವಿರಾಮವಾಯಿತು. ಅದೇ ತಾಸ್ಕೆಂದಿನಲ್ಲಿ ನಮ್ಮ ಪ್ರಧಾನಿಗಳ ಅಂತ್ಯವಾಯಿತು ಕಾರಣ ಇನ್ನುವರೆಗೆ ಗೊತ್ತಿಲ್ಲ -ಸ್ವಾಭಾವಿಕ ಅಂತ್ಯವೋ, ಅಥವಾ ಹತ್ಯೆಯೋ. ಹತ್ಯೆ ಎನ್ನಲು ಅನೇಕ ಕಾರಣಗಳುಂಟು.

ಯುಧ್ದವನ್ನು ಪ್ರಾರಂಭಿಸಲು ಪಾಕಿಸ್ತಾನಕ್ಕೆ ಅನೇಕ ಕಾರಣಗಳಿದ್ದವು. ೧೯೬೨ರ ಚೀನಿಯರಿಗಾದ ಪರಾಭವದಿಂದಾಗಿ ನಮ್ಮ ಸೈನ್ಯದ ಆತ್ಮವಿಶ್ವಾಸ ಕಡಿಮೆಯಾಗಿತ್ತು ಮನೋಧೈರ್ಯ ಕುಸಿದಿತ್ತು.ಕಾಶ್ಮಿರದ ಪ್ರಜೆಗಳು ತಮಗೆ ಬೆಂಬಲ ನೀಡುವರು ಮತ್ತು ಈ ಸಮರದಲ್ಲಿ ಸಹ ಭಾಗಿಗಳಾಗುವರೆಂಬ ವಿಶ್ವಾಸ ಪಾಕಿಸ್ತಾನತ್ತು. ಮತ್ತು ಒಂದು ಸಬಲ ಕಾರಣವೆಂದರೆ ಶ್ರೀ ಲಾಲ ಬಹಾದೂರ್ ಶಾಸ್ತ್ರಿಯವರು ಆಗ ತಾನೆ ಅಧಿಕಾರ ವಹಿಸಿದ್ದರು ಮತ್ತು ಅಧಿಕಾರದ ಸೂತ್ರ ವನ್ನು ಸಂಪೂರ್ಣ ವಹಿಸಲು ಅವಕಾಶವಿತ್ತು.ಇನ್ನೂ ಒಂದು ಮಹತ್ವದ ಕಾರಣವೆಂದರೆ ಚೀನೀಯರು ಪಾಕಿಸ್ತಾನದ ವತಿಯಿಂದ ಭಾಗವಹಿಸಬಹುದಾದ ಸಂಭವ ಮತ್ತು ಅದರಿಂದಾಗಿ ಭಾರತವು ಹಿಂದೆಣಿಯುವ ಸಂಭವ. ಈ ಎಲ್ಲ ಕಾರಣಗಳಿಂದಾಗಿ ಪಾಕಿಸ್ತಾನವು ಭಾರತದ ಮೇಲೆ ಯುದ್ದ ಸಾರಲು ಧೈರ್ಯಮಾಡಿತು. ಅವರ ಈ ಭರವಸೆ ಕಾರ್ಯರೂಪವಾಗದೆ ಅವರಿಗೆ ಹಿಂತೆಗೆಯುವ ಪ್ರಸಂಗ ಬಂದಿತು.

ಈ ಯುಧ್ದ ಪ್ರಾರಂಭವಾದದ್ದು ಗುಜರಾತಿನ ಕಚ್ಚ ಅಖಾಡದಲ್ಲಿ ಏಪ್ರಿಲ್ ೧೯೬೫ ರಲ್ಲಿ. ಆದರೆ ಇಂಗ್ಲಂಡಿನ ಮದ್ಯಸ್ಥಿಕೆ ಎನ್ನಿ ಅಥವಾ ಬೆದರಿಕೆಯನ್ನಿ, ಅದರಿಂದಾಗಿ ಪಾಕಿಸ್ತಾನಕ್ಕೆ ಹಿಂದೆಗೆಯ ಬೇಕಾಯಿತು. ಆದರೆ ಅದೇ ಸೆಪ್ಟೆಂಬರ್ ತಿಂಗಳಲ್ಲಿ ಅಂದರೆ ಮೂರನೆ ದಿನಾಂಕ ರೀತಿಯ ಯುದ್ಧವನ್ನು ಪ್ರಾರಂಬಿಸಿತು. ಮತ್ತು ಈ ಯುದ್ಧ ಯುದ್ಧವಿರಾಮದ ರೇಷೆಯು ಎರಡೂ ಬದಿಗಳಲ್ಲಿ ೨೨ ದಿವಸಗಳವರೆಗೆ ನಡೆಯಿತು. ರಷಿಯಾದ ಮದ್ಯಸ್ಥಿಕೆಯಿಂದ ಯುದ್ಧ ವಿರಾಮದ ಘೋಷಣೆಯಾಯಿತು-ತಾಸ್ಕಂದದಲ್ಲಿ ಒಡಂಬಡಿಕೆಯಾಯಿತು.

ಈ ಯುದ್ಧದ ಮುಖ್ಯ ಸ್ಥಳಗಳೆಂದರೆ ಜಮ್ಮು ಕಾಶ್ಮಿರದ ರಿಖ್ನೂರ ಮತ್ತು ಪಂಜಾಬಿನ ಖೇಮಕರಣ-ಲಾಹೋರ ವಿಭಾಗ. ಇದರ ವಿರೋಧದಲ್ಲಿ ಭಾರತವು ಕೆಲವು ಮುಖ್ಯಗಡಿ ಪ್ರದೇಶಗಳಲ್ಲಿ ಅಮೃತಸರ,ಪಿರೋಜಪುರ ಮತ್ತು ಗುರುದಾಸಪುರಗಳಲ್ಲಿ ಯುದ್ಧ ಭೇದಿಸಿತು. ಕೆಲ ದಿವಸಗಳ ನಂತರ ಸಿರಿಯಾ ಕೂಟ ವಿಭಾಗದಿಂದಲೂ ಪ್ರಾರಂಭಿಸಿದರು ಅಗಿನ ಪ್ರಧಾನಿಯಾದ ಶ್ರೀ ಲಾಲ ಬಹದೂರ ಶಾಸ್ತ್ರೀಯವರು ನಮ್ಮ ಮುಖ್ಯ ಸೇನಾಧಿಕಾರಿಗಳಾದ ಜನರಲ್ ಚೌಧರಿ ಅವರಿಗೆ ಹೇಳಿದರಂತೆ " ಪಾಕಿಸ್ತಾನದ ಸೈನ್ಯ ಕಾಶ್ಮಿರ ಸೇರುವ ಮೊದಲು ನಮ್ಮ ಸೈನ್ಯ ಲಾಹೋರ ಮುಟ್ಟಬೇಕು" ಎಂತಹ ದೈರ್ಯದ ಮಾತು ಮತ್ತು ಸೈನ್ಯಕ್ಕೆ ಸಲಹೆ-ಅಜ್ಞೆಯೆಂದು ಹೇಳಲೂ ಬಹುದು. ಅವರ ಮೂರ್ತಿ ಸಣ್ಣದಾದರೂ ಕೀರ್ತಿ ದೊಡ್ಡದು. ಅದೇ ಕಾಲಕ್ಕೆ " ಜಯ ಜವಾನ್ ಜಯ ಕಿಸಾನ್" ಎನ್ನುವ ಘೋಷಣೆ ಜನ ಜನಿತವಾಯಿತು ಭಾರತದಲ್ಲಿ.

ಪಾಕಿಸ್ತಾನ ಹಿಂಜರಿಯಲಿಕ್ಕೆ ಮುಖ್ಯ ಕಾರಣ ಕಾಶ್ಮಿರದ ಪ್ರಜೆಗಳು ಅವರೆಣಿಸಿದಂತೆ ಬೆಂಬಲ ನೀಡಲಿಲ್ಲವೆಂಬುದು. ಅದಲ್ಲದೆ ನಮ್ಮ ಪ್ರಧಾನಿಗಳು ಪಾಕಿಸ್ತಾನವನ್ನು ಹಿಂದೂಡಲು ಮಾಡಿದ ಧೈರ್ಯ ಮತ್ತು ಧಡ ನಿಶ್ಚಯ. ಅದೂ ಅಲ್ಲದೆ ಸೈನ್ಯಕ್ಕೆ ಮತ್ತು ಸೈನ್ಯದ ಮನೋಧೈರ್ಯ. ಈ ಯುದ್ಧದಲ್ಲಿ ನಿಶ್ಚಯವಾಗಿ ಯಾರೂ ಗೆಲ್ಲಲಿಲ್ಲ ಅಥವಾ ಸೋಲಲಿಲ್ಲ. ಈ ಸತ್ಯ ಇಬ್ಬರಿಗೂ ಮನೋಗತವಾಯಿತು ಮತ್ತು ಜಗತ್ತಿನ ಇತರ ಶಕ್ತಿಯುತ ರಾಷ್ಟ್ರಗಳ ಒತ್ತಡಗಳಿಂದಾಗಿ ಈ ಯುದ್ಧ ವಿರಾಮ ಘೋಷಿಸಬೇಕಾಯಿತು ಮತ್ತು ಈ ಕಾರಣಗಳಿಂದಾಗಿ ಈ ಯುದ್ಧ ಅಷ್ಟೊಂದು ಸ್ಮರಣೀಯವಾಗಲಿಲ್ಲ-೧೯೭೨ರ ಸಮರದ್ದು' ಹಾಗೆ.

ಈ ಯುದ್ಧವನ್ನು ಕಂಡ, ನಷ್ಟವನ್ನು ಅನುಭವಿಸಿದ ಕೆಲವು ಭಾರತೀಯರು ಅದರ ಅನುಭವವನ್ನು ಎಂದಿಗೂ ಮರೆಯಲಾರರು. ಅವರ ಕೆಲವು ಅನುಭವಗಳನ್ನು ಇಲ್ಲಿ ಹೇಳಲು ಸೂಕ್ತವೆನಿಸುತ್ತದೆ. ಇವು ಕಂಡು ಕೇಳಿದ್ದ ಸ್ವಂತ ಅನುಭವಗಳು."ನಾವು ನಮ್ಮ ಅದಿಬದಿಯವರೆಲ್ಲ ಹತ್ತಿರದ ಒಂದು ಹಳೆಯ ಕಟ್ಟಡದಲ್ಲಿ ಸಂಜೆಗೆ ಹೋಗಿ ಅಡಗುತ್ತಿದ್ದೆವು. ಈ ದೊಡ್ಡ ಕಟ್ಟಡವು ಒಂದು ಬಂಕರಿನಂತೆ ಉಪಯೋಗಿಸಲಾಯಿತು-ಯಾವಾಗ ಬಾಂಬುಗಳ ದಾಳಿ ಆರಂಭವಾಗುತ್ತಿತ್ತೋ ಆಗ'ಅನಿಲ ಚನ್ನನಾ,ನಿವೃತ್ತ ನ್ಯಾಯಾ ಲಯದ ನೌಕರ ವಯಸ್ಸು ೬೦.

"ನಮ್ಮ ಮನೆಗಳೆಲ್ಲ ಸುಟ್ಟು ಹೋದವು. ನಾವು ಟೆಂಟುಗಳಲ್ಲಿ ವಾಸಿಸಿದೆವು.ಎರಡು ಬಟ್ಟಲುಗಳು, ಒಂದು ಗ್ಲಾಸು ಮತ್ತು ಒಂದು ಪ್ಲೇಟು(ತಟ್ಟೆ)- ಇಷ್ಟೇ ವಸ್ತುಗಳು ಉಳಿದದ್ದು"ಬಚೌನ ಕೌರ, ರೈತರ ಮನೆತನ,ವಯಸ್ಸು ೬೮. "ನಮ್ಮ ಹಳ್ಳಿ ಸಂಪೂರ್ಣ ಧಂಸ ವಾಯಿತು. ಪಾಕಿಸ್ತಾನಿಗಳು ಎಲ್ಲವನ್ನು ದೋಚಿದರು ಮತ್ತು ಯುದ್ಧವನ್ನು ಗೆದ್ದವು ಅದರೆ ನಾನು ನನ್ನ ಯೌವನವನ್ನು ಕಳೆದುಕೊಂಡು"-ತಿಲಕ ಚನ್ನಾನಾ, ದನದ ಮೇವನ್ನು ಮಾರುವವರು ವಯಸ್ಸು ೨೮. ಯುದ್ಧ ಮುಗಿದಾಗ ವೈರಿಗಳು ಟ್ಯಾಂಕರುಗಳನ್ನು ಪ್ರದರ್ಶಿಸಿಸಲು ಇಡಲಾಗಿತ್ತು. ದೊಡ್ಡವರು ಮತ್ತು ಮಕ್ಕಳು ಅದರೊಟ್ಟಿಗೆ ಛಾಯಾಚಿತ್ರವನ್ನು ತೆಗೆಯಿಸಿಕೊಂಡರು - ಲಕ್ಷಿಕಾಂತಾ ಚಾವ್ಲಾ, ಭಾಜಪ ಮಂತ್ರಿ ವಯಸ್ಸು ೭೨. " ಹೊಲಗಳು ಬೆಳೆಗಳ ಬದಲು ಹೆಣಗಳಿಂದ ತುಂಬಿದ್ದವು. ಎರಡು ಕಡೆಯ ಸೈನಿಕರು ರಾಶಿ ರಾಶಿಯಾಗಿ

ಬಿದ್ದಿದ್ದವು". ತ್ರಿಲೋಕ ಸಿಂಗ ಶಂಬೋಧ, ವಯಸ್ಸು ೮೫. ಶ್ರೀ ಶಾಸ್ತ್ರಿಯವರ ಸರಕಾರ ೨೦ಕೋಟಿ ರೂ. ಸಹಾಯ ಧನವನ್ನು ಘೋಷಿಸಿದರು.ಆದರೆ ಹಲವರಿಗೆ ಏನೂ ದಕ್ಕಲಿಲ್ಲ. ಕೆಲವರಿಗೆ ಕೇವಲ ರೂ.೫೦೦. ಎಂತಹ ವಿರೋಧಾಭಾಸ!

ಆಧಾರ - *Out Look*

೨೫.೫.೨೦೧೫

## ತುಂಬಿದ ಕೊಡ ತುಳುಕುವುದುಂಟೇ?

“ಮಂಕು ತಿಮ್ಮನ ಕಗ್ಗ (ನಾಲ್ಕನೆಯ ಮುದ್ರಣ,ಜುಲೈ ೧೯೬೪, ಕ್ರೋಧಿಸಂ॥ ಆಷಾಢ ಮಾಸ) - ಈ ಗ್ರಂಥವನ್ನು ಕುರಿತು ಡಿ.ವಿ.ಜಿ.ಯವರು ಹೇಳಿದ ಮಾತುಗಳನ್ನು ನಾವೆಂದೂ ಮರೆಯುವಂತಿಲ್ಲ. ನಮ್ಮ ಪೂರ್ವಿಕರು ಮಕ್ಕಳಿಗೆಹೆಸರಿಡುವುದರಲ್ಲಿಒಂದುವಿಶೇಷಪದ್ಧತಿಯನ್ನಿಟ್ಟು ಕೊಂಡಿದ್ದರು. ಮೊದಲ ಎರಡು, ಮೂರು ಮಕ್ಕಳು ಕಳೆದು ಹೋಗಿದ್ದರೆ ಮೂರನೆಯದಕ್ಕೋ, ನಾಲ್ಕನೆಯದಕ್ಕೊ ‘ಗುಂಡಪ್ಪ, ಕಲ್ಲಪ್ಪ,ತಿಪ್ಪಯ್ಯ, ಹುಚ್ಚಯ್ಯ’ ಎಂಬುದಾಗಿ ಹೆಸರು ಕೊಡುತ್ತಿದ್ದರು. ಅವರ ಭಾವ ಆ ಮಗುವಾದರು ಎಲ್ಲದರೂ ಗುಂಡು ಕಲ್ಲಿನಂತೆ, ತಿಪ್ಪೆಯ ರಾಶಿಯಂತೆ, ಆಯುಸ್ಸುಂಟಾಗಿ ಬಾಳಿಕೊಳ್ಳಲಿ ಎಂದು. ಈ ಗ್ರಂಥ ಮೊದಲು ಪ್ರಕಟವಾದಾಗ ಇದ್ದ ಮನೋ ಭಾವ ಅಂಥಾದ್ದು. ಇದು ಪಂಡಿತರನ್ನು ಪ್ರಸಿದ್ಧರನ್ನೂ, ಪುಷ್ಪರನ್ನೂ ಉದ್ದೇಶಿಸಿದ್ದಲ್ಲ. ಬಹು ಸಾಮಾನ್ಯರಾದವರ ಮನೆಯ ಬೆಳಕಿಗೆ ಇದು ಒಂದು ತೊಟ್ಟಿನಷ್ಟು ಎಣ್ಣೆಯಂತಾದರೆ ನನಗೆ ತೃಪ್ತಿ. ನಮ್ಮ ಜನ ಈ ಗ್ರಂಥದ ವಿಷಯದಲ್ಲಿ ಬಹು ಅಭಿಮಾನ ತೋರಿಸಿದ್ದಾರೆ. ಅವರು ನನ್ನ ತಲೆಯ ಮೇಲೆ ಇರಿಸಿರುವ ಹರಕೆಯ ಹೂವಿನ ವಾಸನೆ ಈಗ ನನ್ನ ಜೀವದ ಉಸಿರಾಗಿದೆ. ಅವರಿಗೆ ನನ್ನ ಹೃದಯದ ಕೃತಜ್ಞತೆಯನ್ನು ಪೂರ್ತಿಯಾಗಿ ಅರಿಕೆ ಮಾಡಬಲ್ಲ ಮಾತುಗಳನ್ನು ನಾನರಿಯೆ-ತುಂಬಿದ ಕೊಡ ತುಳುಕುವುದುಂಟೇ?

ನಮ್ಮ ಬೃಹದ್ಗ್ರಂಥಗಳಾದ ಶ್ರೀಮದ್ರಾಮಾಯಣ,ಮಹಾಭಾರತ,ಭಗವದ್ಗಿತೆ ಎಂಬೋ ಬೃಹತ್ ಸಾಗರದಲ್ಲಿ ಅಡಗಿರುವ ಅಣಿ ಮುತ್ತುಗಳನ್ನು ಆರಿಸಿ,ಹೆಕ್ಕಿ ತೆಗೆದು,ಸುಂದರ,ಸರಳ ಕನ್ನಡ ಕಸ್ತೂರಿಯಲ್ಲಿ ನಮಗಾಗಿ, ಕನ್ನಡಿಗರಿಗಾಗಿ ನಾಲ್ಕು ಸಾಲಿನ ೯೪೫ ಕಗ್ಗಗಳಲ್ಲಿ ನೀಡಿರುವ ‘ಈ ಆಸ್ತಿ’ ನಮಗೆ ದಾರಿದೀಪ ವಾಗುವುದ ರಲ್ಲಿ ಸಂದೇಹವಿಲ್ಲ. ಅವರು ನಮ್ಮ ಪಾಲಿಗೆ ಪ್ರಾತಃ ಸ್ಮರಣೀಯರು.

ಅವರ ಒಂದೊಂದು ಕಗ್ಗವೂ, ನಮ್ಮನ್ನು ಚಿಂತನ-ಮಂಥನ ಮಾಡಲು ಉದ್ದೀ ಪನಗೊಳಿಸುತ್ತದೆ. ಇವುಗಳಲ್ಲಿ ಏನೇನಿದೆ ಎಂದು ವಿವರಿಸಲು ನಾನು ಶಕ್ಯಳಲ್ಲ. ನಮ್ಮ ಈ ಬದುಕಿನ ಹಾದಿಯನ್ನು ಕ್ರಮಿಸಲು, ಸಮಸ್ಯೆಗಳು ಎದಿರಾದಾಗ ಪರಿ ಹರಿಸಲು ಸುಲಭೋಪಾಯಗಳು ಈ ಕಗ್ಗಗಳಲ್ಲಿವೆ.

ತಮ್ಮ ಇಡೀ ಜೀವನವನ್ನು ಕಾರ್ಪಣ್ಯದಲ್ಲಿಯೇ ಕಳೆದಿದ್ದರೂ ಸಹ ಉತ್ಸಾಹ, ಹುಮ್ಮಸ್ಸು ಮರಳಿ ಹುಟ್ಟಿ, ಮಾದರಿ ಬದಕು ನಡೆಸಲು ಅನುವು ಮಾಡಿ ಕೊಡುವ ಕಗ್ಗ ಗಳನೇಕವಿದೆ. ಆಧ್ಯಾತ್ಮಿಕ ಚಿಂತಕರಿಗೆ ಅಷ್ಟೇ ಅಲ್ಲದೆ ಗೃಹಸ್ಥರಿಗೆ,ಗೃಹಣಿ ಯರಿಗೆ ಸಹ ತಮ್ಮ ನಡೆ-ನುಡಿ ಹೇಗಿರಬೇಕು ಎಂಬುದರ ಬಗ್ಗೆ ಕಿವಿ ಮಾತುಗಳು ಸಹ ಹಲವು ಹತ್ತು ಕಗ್ಗ ಗಳಲ್ಲಿ ಕಂಡುಬರುತ್ತದೆ. ಒಂದೇ ಒಂದು ದಿನ ಓದಿ ಮು ಗಿಸುವಂತಹ ಕಥೆ-ಕಾದಂಬರಿಯಲ್ಲ ಇದು. ನಮ್ಮ ಇಡೀ ಜೀವನದಲ್ಲಿ, ನಾವು ಎದಿರಿಸಬೇಕಾದ ಸಮಸ್ಯೆಗಳಿಗೆ, ದುಃಖ-ದುಮ್ಮಾನಗಳಿಗೆ ಸಾಂತ್ವನ ನೀಡುವ ಈ ಕಗ್ಗ ಗಳನ್ನು ಆಗಿಂದಾಗ್ಗೆ ಓದುತ್ತಲೇ ಇರಬೇಕು. ಈ ಕಗ್ಗ ನಮ್ಮ ಆತ್ಮೀಕಯ ಹೃದಯಕ್ಕೆ ಹತ್ತಿರವೆನಿಸುವ “ಆಪದ್ಬಾಂಧವ” ಎಂದೇ ನನ್ನ ಅನಿಸಿಕೆ-ಅಭಿಪ್ರಾಯ.

ಇತ್ತೀಚೆಗೆ ಕಗ್ಗ ದ ಪುಟಗಳಲ್ಲಿ ಕಣ್ಣಾಡಿಸಿದಾಗ ‘ಒಣಗಿದೊಡೆ ಸವುದೆ’(ಸೌದೆ)ಯಲ್ಲಿ ಕರ್ನಾಟಕ ಸಂಗೀತದ ರಾಗಗಳ ಹೆಸರುಗಳು,೮ ಸಾಲುಗಳಲ್ಲಿ (ಎರಡು ಕಗ್ಗಗಳು) ಕಂ ಡು ಬಂದವು. ನನಗೆ ಬಹಳ ಆಶ್ಚರ್ಯವಾಯಿತು, ಯಾಕೆಂದರೆ, ಈ ಕಗ್ಗ ದಲ್ಲಿ, ‘ವೃದ್ದಾಪ್ಯ’,ಆಗ ಅನುಭವಿಸುವ ನೋವು, ಪರಾವಲಂಬನೆ, ಅನಿಶ್ಚಯ ಬದುಕಿನ ಕೊನೆಯ ದಿನಗಳು,ಮುಂತಾದ ಕಟುಸತ್ಯಗಳನ್ನು ತೆರೆದಿರಿಸಿದ್ದಾರೆ. ಇದರ ನಡುವೆ ‘ಸಂಗೀತದ ರಾಗಗಳು’ ಅದರ ಹೆಸರುಗಳು ಹೇಗೆ ಕಗ್ಗದಲ್ಲಿ ನುಸುಳಿಕೊಂಡವು? (ಮುಕ್ತಿ ಮಾರ್ಗಕ್ಕೆ ದೀಪ ತೋರಿಸಿದ್ದಾರೆ)

ವೇದಾಂತಕ ವಾಕ್ಯಗಳ ನಮಕಾಮ ವಾಕಗಳ।
ಕೇದಾರಗೌಳ, ಮಣಿರಂಗ, ಆರಬಿಗಳ॥
ನಾದಂಗಳಲಿ, ಮನವ ಬೆರಸಿ ನೀನುತ್ತಮಿಸೆ।
ಸಾಧನವೋ ಮುಕ್ತಿಗದು-ಮಂಕುತಿಮ್ಮ ॥
ಮೋಹನ, ಆನಂದ ಭೈರವಿ,ಶಂಕರಾಭರಣ।
ಶಾಹನ, ಕುರಂಜಿ,ಕೇದಾರ,ಕಾಪಿಗಳ ॥
ಮೋಹ ಸರ್ವಸ್ವಗಳ ರಾಗಾಬ್ಧಿಯೋ ಬ್ರಹ್ಮ।
ಗಾಹಿಸದರೊಳಗೆ ನೀಂ-ಮಂಕುತಿಮ್ಮ ॥

ಕಷ್ಟ ಜೀವನಪಾಕ; ಕಷ್ಟ ಧರ್ಮವಿವೇಕ।
ಎಷ್ಟೆಷ್ಟು ನೀತಿ ಯುಕ್ತಿಗಳ ಬಗೆದಡೆಯುಂ॥
ಇಷ್ಟಷ್ಟು ನಿನ್ನೊಳ್ ಬಳಕಿಳಿವಿಲ್ಲದಿರೆ ನಷ್ಟ।
ದೃಷ್ಟಿ ಸೂಕ್ತವೆ ಗೆತಿಯೊ ಮಂಕುತಿಮ್ಮ॥

ನಾನು ಪದೇ ಪದೇ ನೆನಪು ಮಾಡಿಕೊಂಡು ಮನಸ್ಸನ್ನು ಸಮಾಧಾನ ಸ್ಥಿತಿಗೆ ತಂದು ಕೊಳ್ಳಲು ಈ ಕೆಳಗೆ ಕಾಣಿಸುವ ಕಗ್ಗಗಳು ಸಹಾಯಕವಾಗಿವೆ .(ಮುಖ್ಯ ನ್ಯಾಯ ಮೂ ರ್ತಿ, ಶ್ರೀಯುತ ನಿಟ್ಟೂರು ಶ್ರೀನಿವಾಸ ರಾವ್ ರವರು ಸಹಿ ಮಾಡಿ, ೨೨.೧೧. ೧೯೮೭ ರಲ್ಲಿ ನನಗೆ ‘ಮಂಕು ತಿಮ್ಮ ನ ಕಗ್ಗ’ ಕೊಟ್ಟರು. ಅಂದಿನಿಂದ ಇಂದಿನ ವರೆಗೆ ಅದೆಷ್ಟು ಬಾರಿ ಓದಿದ್ದೇನೋ ನನಗೆ ಗೊತ್ತಿಲ್ಲ) ಅವರ ಶುಭ ಹಾರೈಕೆ ನಾನು ಮರೆಯು ವಂತಿಲ್ಲ.

೧) ಹೊಸ ಚಿಗುರು ಹಳೆ ಬೇರು ಕೂಡಿರಲು ಮರಸೊಬಗು।
ಹೊಸ ಯುಕ್ತಿ, ಹಳೆ ತತ್ವ ದೊಡಗೂಡೆ ಧರ್ಮ॥
ಋಷಿ ವಾಕ್ಯದೊಡನೆ, ವಿಜ್ಞಾನ, ಕಲೆ ಮೇಳಿವಿಸೆ।
ಜಸವು ಜನಜೀವನಕೆ - ಮಂಕುತಿಮ್ಮ ॥

೨) ಶಕ್ತಿ ಮೀರ್ದ ಪರಿಕ್ಷೆಗಳನ್ನು ವಿಧಿ ನಿಯಮಿಸಿರೆ।
ಯುಕ್ತಿ ಮಿರ್ದ ಪ್ರಶ್ನೆಗಳನ್ನು ಕೇಳುತಿರೆ॥
ಚಿತ್ತವನ್ನು ತಿರಿಗಿಸೊಳಗಡೆ, ನೋಡು,ನೋಡಲ್ಲ।
ಸತ್ತ್ವದ ದಚ್ಚಿನ್ನಝರಿ - ಮಂಕುತಿಮ್ಮ ॥

೩) ಕಳವಳವ ನೀಗಿಬಿಡು, ತಳಮಳವ ದೂರವಿಡು।
ಕಳೆ, ತಳ್ಳು ಗಲಭೆ ಗಾಭರಿಯ ಮನದಿಂದ॥
ಅಲೆದಾಡುತಿರೆ ದೀಪ ಕಣ್ಣೆ ಗುರಿತಪ್ಪುವುದು।
ಕಿಳಿಕಿಳಿವು ಶಾಂತಿಯಲಿ -ಮಂಕುತಿಮ್ಮ ॥

೪) ಕೀರ್ತಿ, ಹೆಸರು, ಪದವಿಗಾಗಿ ಹಂಬಲಿಸುವವರಿಗಾಗಿ,
ಇಳೆಯಿಂದ ಮೊಳಕೆಯಾಗಿದೆಂದು ತಮಟೆಗಳಲ್ಲಿ ।
ಫಲ ಮಾಗುವಂದು ತುತ್ತೂರಿ ದನಿಯಿಲ್ಲ ॥
ಬೆಳಕೀವ ಸೂರ್ಯ-ಚಂದ್ರರ ದೊಂದು ಸದ್ದಿಲ್ಲ।
ಹೊಲಿ ನಿನ್ನ ತುಟಿಗಳನು -ಮಂಕುತಿಮ್ಮ ॥

ಪ್ರಕೃತಿ ಯಲ್ಲನ ಕಾರ್ಯ ವೈಖರಿಯಲ್ಲಿ ಯಾವುದೇ ಹಂಬಲವಿಲ್ಲ, ‘ಮನುಷ್ಯ’ ಇದರಿಂದ ಪಾಠ ಕಲಿಯುವುದೆಂದು?

೫) ಆತ್ಮ ಚಿಕಿತ್ಸೆ ಹೇಗೆ ಎನ್ನುವಾಗ, ಕಗ್ಗದಲ್ಲಿ ಅತ್ಯದ್ಭುತ ಔಷದಿ ನೀಡಿದ್ದಾರೆ ಡಿ.ವಿ.ಜಿ. ಯವರು.
ತರಚು ಗಾಯವ ಕೆರೆದುಣ್ಣನಾಗಿವುದು ಕಪಿ ।
ಕೊರತೆಯೊಂದನು ನೀನು ನೆನೆನೆನೆದು ಕೆರಳಿ ॥
ಧರೆಯೆಲ್ಲವನು ಶಪಸಿ ಮನದಿ ನರಕವನಿಲಿಸಿ ।
ನರಳುವುದು ಬದುಕೇನೊ? ಮಂಕುತಿಮ್ಮ॥

೬) ತರಿದಿ ಬಿಡು, ತೊರೆದು ಬಿಡು, ತೊರೆದು ಬಿಡು ನೆನಹಿಂದ ।
ಕರೆಕರೆಯ ಬೇರುಗಳ, ಮನದ ಗಂಟುಗಳ ॥
ಉರಕೆ ಸೊಗಸೆನಿನಿದಾ ಪ್ರೀತಿ ಹಾರ ಮುಮ್ಮೊರ್ಮೆ ।
ಉದಳಪ್ಪುದಾತ್ಮಕ್ಕೆ - ಮಂಕುತಿಮ್ಮ ॥

ಇಷ್ಟಾದರೂ ಓದಿದ ಮೇಲೆ, *'Art of Living'* ಕಲಿಯಲಲು ಹುಡುಕಿ ಹೋಗಬೇಕೆ? ಇದೇ ಈ ಮಂಕು ತಿಮ್ಮಿಯ ಪ್ರಶ್ನೆ.

**ವನಜಾ ರಾಜನ್**

## ಶಹರವನ್ನು ಹಸಿರಾಗಿಸುವುದು

ಬೆರೇಬದಿಯಲ್ಲಿ ಹಸಿರು ಹುಲ್ಲು ಕಾಣಿಸಬೇಕೆಂದರೆ ನಿಮಗೆ ಬೇಕಾದದ್ದು ಒಂದು ಬಣ್ಣದ ಡಬ್ಬಿ - ಹಸಿರು ಬಣ್ಣದ್ದು.California ಯಾದ ನಾಗರಿಕರು ಬರಗಾದಲ್ಲಿ ಮಾಡಿದ್ದು ಅದನ್ನೇ. ಬರಗಾಲದಲ್ಲಿ ತಮ್ಮ ಅಂಗಳದಲ್ಲಿ ಒಣಗಿದ ಹುಲ್ಲಿಗೆ ಹಸಿರು ಬಣ್ಣವನ್ನು ಹಚ್ಚಿ ಅಂಗಳವನ್ನು ಹಸಿರಾಗಿಸಿದರು. ಈ ನಾಲ್ಕನೇ ಬರಗಾಲದ ವರ್ಷದಲ್ಲಿ ನೀರಿನ ಅಭಾವದಿಂದಾಗಿ, ಕಡಿತದಿಂದಾಗಿ ತಮ್ಮ ಅಂಗಳದ ಹುಲ್ಲನ್ನು ಬಣ್ಣ ಹಚ್ಚಿ ಹಸಿರಾಗಿಸಿದರು. ಅದರಿಂದಾಗಿ ಹೊಸ ಬಣ್ಣದ ಕಾರಖಾನೆಗಳು ಜನ್ಮತಾಳಿದವು ಮತ್ತು ಶ್ರೀ ಮಂತರಾದವು - ವಾವಾಚರಣ ಸ್ನೇಹಿ ಬಣ್ಣವನ್ನು

ತಯಾರಿಕೆ - ಉತ್ತಮ ದಿನಗಳನ್ನು ಕಂಡವು.

ಬಿ.ಎ.ಚ್ ಕಟ್ಟಿ
ಆಧಾರ:- *The Week*
*31.5.2015*

### ಸ್ವಚ್ಛ ವಾರನಾಸಿ

**ಮಹಾತ್ಮಾ ಗಾಂಧಿಜಿಯರು (ಅವರಿನ್ನೂ ಅಗ ಮಹಾತ್ಮರಾಗಿರಲಿಲ್ಲ)೧೯೦೨ ರಲ್ಲಿ ಭಾರತದ ಪ್ರವಾಸಕ್ಕೆ ಬಂದಾಗ ಅಫ್ರಿಕಯಿಂದ ಕಾಶಿಗೆ ಭೇಟಿಕೊಟ್ಟರು.ಪವಿತ್ರ ಮತ್ತು ಧರ್ಮಸ್ಥಳವೆಂದು ಪ್ರಸಿದ್ಧವಾದ ಈಶಹರಕ್ಕೆ ಬಂದಾಗ ವಿಶ್ವನಾಥ ದೇವಾಲಯಕ್ಕೆ ದರ್ಶನ ಕೊಡದೇ ಇರಲು ಸಾಧ್ಯವೇ ಯಾವುದೇ ಹಿಂದುವಿಗೆ. ಅದರಂತೆ ಅಪರೂಪದ ಕಾಶೀ ವಿಶ್ವನಾಥನ ದರ್ಶನಕ್ಕೆ ಹೋದರು ಅಗ ಅವರು ಹೇಳಿದ್ದು "ಅಲ್ಲಿ ಹಾರಾಡುತ್ತಿರುವ ನೊಣಗಳ ಗುಂಪುಗಳು ಮತ್ತು ಯಾತ್ರಿಕರ, ಅಂಗಡಿಕಾರರು ಮಾಡುತ್ತಿದ್ದ ಗೊಂದಲ. ಒಡದಾಟಗಳು ಅಸಹನೀಯವಾಗಿದ್ದವು.ಯಾವ ಸ್ಥಳದಲ್ಲಿ ಶಾಂತತೆ ಮತ್ತು ಭಾಂದವ್ಯದ ವಾತಾವರಣವಿರಬೇಕೊ ಅದು ಮಾಯವಾಗಿತ್ತು". ಮುಂದೆ ನಡೆದು ಮಂದಿರದ ಬಾಗಿಲನ್ನು ತಲುಪಿದಾಗ "ಕೊಳೆಯುತ್ತಿರುವ ಹೂಮಾಲೆಗಳ ದುರ್ವಾಸನೆ ಅವರನ್ನು ಸ್ವಾಗತಿಸಿತು" ಎನ್ನುತ್ತಾರೆ. ಮತ್ತು ಯಾವುದೋ ಭಕ್ತನಿಂದ ಅಲ್ಲಿಯ ಸಂಗಮರಮರಿ ನೆಲವನ್ನು ಒಡೆದು ಅಲ್ಲಿ ನೋಟುಗಳನ್ನು ಕೂಡಿಸಿದ್ದನಂತೆ ಅವನ ಭಕ್ತಿಯನ್ನು ಪ್ರದರ್ಶಿಸಲು. ಅದು ಧೂಳುಮಯವಾಗಿತ್ತು. ಅವರು ದೇವರನ್ನು ಹುಡುಕುತ್ತಾ ಮಂದಿರವನ್ನು ಸುತ್ತಾಡಿದರಂತೆ ಆದರೆ ಅವರಿಗೆ ಆ ಭಗವಂತ ಸಿಗಲಿಲ್ಲ-ಕಾಣಲಿಲ್ಲ".**

**ಅವರ ತದನಂತರದ ಭೇಟಿಯಲ್ಲಿ ಸಹ-೧೯೨೦ ರಿಂದ ೧೯೪೨ರವರಿಗೆ ಕಂಡದ್ದು, ಅನಿಸಿದ್ದು ಇದೇ ಭಾವನೆ.ಗಂಗಾ ನದಿಯ ದಂಡೆಯ ಮೇಲೆ ಪಾದವಿಲ್ಲದೇ ನಡೆಯಲು ಸಾಧ್ಯವೇ ಇಲ್ಲ ಮತ್ತು ನದಿಯ ನೀರನ್ನು ಮುಟ್ಟಲು ಹೇಸಿಗೆ- ಕುಡಿಯುದಂತೂ ದೂರದ ಮಾತು.ಇನ್ನು ಸ್ನಾನ- ಸಾಧ್ಯವೇ ಮಾಡಲು. ಇದವರ ಆಗಿನ ಅನಿಸಿಕೆ. ಇವತ್ತಿಗೂ ಇದರಲ್ಲಿ ಬದಲಾವಣೆಯಿಲ್ಲಿ. ಬಿ.ಎಚ್.ಕಟ್ಟಿ.**

**(ಆಧಾರ-Out Look ದಿ. ೧೯.೧.೨೦೧೫ -ರಾಮಚಂದ್ರ ಗುಹಾ ಅವರ ಗಾಂಧೀಜಿಯವರ ಬನಾರಸ ಪ್ರವಾಸ)**

**ನಾನು ಇಲ್ಲಿಯ ವರೆಗೆ ಮೂರು ಸಲ ಬನಾರಸಕ್ಕೆ ಭೇಟಿಕೊಟ್ಟಿದ್ದನೆ. ಇದೇ ಅನುಭವ. ಒಂದು ಸಲವೂ ನದಿಯಲ್ಲಿ ಸ್ನಾನಮಾಡಬೇಕೆಂದು ಅನಿಸಲಿಲ್ಲ. ಸಂಜೆಯ ದೀಪಾರಾಧನೆ ಮಾತ್ರ ಅದ್ಭುತ,ರಮನೀಯ - ಅದನ್ನು ಬೋಟಿನಲ್ಲಿ ಕುಳಿತು ನೋಡಿದ್ದಷ್ಟೇ ನದಿಯ ನೀರಲ್ಲಿ ಕೈಯೂ ಆಡಿಸಲಿಲ್ಲ-ಮನಸ್ಸಾಗಲಿಲ್ಲ.**

## SHRE RAGHAVENDRA SWAMY ASHTOTTARA SEVA

The annual programme of Shri Raghavendra Swamy Ashtottara Seva and Shri Satyanarayan Pooja will be held this year on Sunday, 23rd August 2015 from 9=00a.m. onwards at Yoga Vidya Niketan, Sector 9A, Vashi. All devotees who wish to participate in the programme are requested to enroll themselves with any of the following trustees of Shri Raghavendra Seva Trust at the earliest.

| | | |
|---|---|---|
| 1. Shri S.B.Kurbet | - Mob. No. | 9821902882 |
| 2. Shri A.B.Walvekar | - " | 9322276122 |
| 3. Shri Sudesh Karkera | - " | 9869052768 |
| 4. Mrs. Medha Kulkarni | - " | 9004390723 |
| 5. Kannada Sangha | - " | 27653443 |

## New Managing Committee 15-16/16-17

*Our Sangha's AGM was held on 28th June 15 and following members were elected. Subsequently M.C. meeting was held on 4th July and office bearers were elected.*

1. *Mr. B.B. Rao - Hon. Chairmen*
2. *Mr.B.H.Katti - Hon. President*
3. *Mr. BNL Murthy - Hon. Vice President*
4. *Mr. Y.K. Rao - Hon. Vice President*
5. *Ms. Savita Naik - Hon. Vice President*
6. *Mr. Gopal Shetty - Hon. Vice President*
7. *Ms. Sujata Rao - Hon. Secretary*
8. *Ms. Vasanti Karkera - Hon. Jt. Secretary*
9. *Mr. Jaya Shetty - Hon Treasurer*
10. *Mr. Prabhakar Devadiga 11. Mr. Sudesh Karkera*
12. *Ms. Savita Joishy 13. Mr. Narayan G. Pujari*
14. *Mr. Sreedhar Mysore 15. Mr. R.R.Kulkarni*
16. *Mr. Bhaskar Shetty 17. Mr. K.B. Walvekar*
18. *Mr. Madhusudhan TR 19. Mr. Raghu Moolya*

## OBITUARY

*We aredeeply grieved at the untimely sudden demise of Shri. Sheshadari husband of our member Ms. Manorama Rao on 18th May, 2015. He was only 49yrs old and resident of Airoli. He was son-in-law of Vice President Y.K.Rao. he is survived by wife & son. We convey our heartfelt condelence to the bereared family and pray for eternal peace to the departed soul and pray Lord give the family strength to sustain the great loss.*

## MARATHI CLASSES

*It is proposed to start Marathi Classes for beginners from Monday 10th August 2015. Classes will be held every monday between 4=00 and 5=00p.m. in our library. Admission is open to all. For more details and enrolment please contact Sangha's office on 27653443.*

## KANNADA CERTIFICATE COURSE

*Classes for Kannada Certificate Course of Mumbai University will be started in our Sangha from Sunday,9th August 2015 at 6=00p.m. Classes will be held every sunday,between 6=00 and 8=00p,m,Minimum qualifica tion requied is Xth Std. For more information and enrolment please contact Sangha's office on 27653443.*

*MBA, MCA, BBA*

*From International School of Professional Studies*

*I.S.P.S. has built foundation on a wide base of knowledge which includes the elements of professional, subjective, practical, spiritual base. We have that in competitive & fast changing environment, it is time of complete knowledge and efficiency. This programme shall train the students into becoming decision makers with social sensitivity and a broad strategic vision*

*Contact: 93200 23450 or naik@ plutous.in*

**MATRIMONIAL**

**Alliance invited for a Mogaveera girl, 27yrs, 5'1" MBA (HR). Working in Reliance JIO Infocom Ltd, Ghansoli, Navi Mumbai. Interested parties pls.Contact: Ms. Jyothi K. M:- 9987081543**

**E-mail :- jyothi.p.maindan@gmail.com**

**RATNA CHANDRAN PLACEMENT**

**We provide following personalised services**

** Patient's Care * Governess *Child Care*

** House Keeping * Senior Citizens' Care*

** Many more such services*

***For All Your Needs Please Contact:-***

**M0b. 96190 56759 / 97692 44048**

**Available**

**5 room and 3 room bungallows in Vashi and KoparKhairane for accomodation of wedding guests**

**Contact 9321014935 & 9322234228**

**SHREE GURU RAGHAVENDRA CATERING SERVICES**

*We undertake* **Pure Vegetarian Catering** *including Home Delivery Tiffin Services, and arranging* **Religious Functions** *(Ganapati Havan, Satyanarayan Pooja, Graha Shanti & other types of havans) and preparing* **Computerized Horoscope** *in English,Hindi and Kannada*

*FOR DETAILS CONTACT:*

**MR.UDAY BHAT: 9324 903594 / 80801 55775 /99307 18495**

**Email : uday.bht@gmail.com**

*Add.: Reshma Corner, Plot No. D-10, Room No. 304, Sector - 5, Koparkhairane, Navi Mumbai - 400709 (Behind Municipal School) or Room No.T - 187, Sector - 4, Airoli, Navi Mumbai - 400708 RH-34, Nr. Tilak School, Sector-5,Ghansoli, Navi Mumbai-400701*

*VASTU IS SCIENCE*

**Uday Suvarna**

*Dip. Interior Design from L.S.Raheja*

*Vastu Consultancy For Residential & Commercial Premises*

**Megha Mattress Centre**

*For Cotton, Foam, MM Foam and Coir Mattress, Sleepwell Mattress, Pillows, Cushions, Bolsters, Curtains, Sofa Covers, Making and Repairing of Sofas*

*Service Unit No. 8, Sector 6, Vashi, Navi Mumbai - 400 703.*

*Contact: 9820676412 / 98199 82971/ 27827471*

**D i n e s h a C h a d a g a A**

Purohit & Jyothish

NL 5,Bld. No.17, Flat No.7, Sector-11, Hill View Apartments, Nr.Surya Hospital, Nerul, Navi Mumbai-400706. Tel.27721747 (M) 9869501747

**ಗಣಹೋಮ, ಸತ್ಯನಾರಾಯಣಪೂಜೆ, ಗೃಹಪ್ರವೇಶ, ವಾಸ್ತುಶಾಂತಿ, ಇನ್ನಿತರ ಎಲ್ಲಾ ಧಾರ್ಮಿಕ ವೈದಿಕ ಕರ್ಮಾಂಗಗಳನ್ನು ಸುವ್ಯವಸ್ಥಿತವಾಗಿ ಮಾಡಿಕೊಡಲಾಗುವುದು . ಜಾತಕ ಹಾಗೂ ಜ್ಯೋತಿಷ್ಯ ಚಿಂತನೆ ಮಾಡಲಾಗುವದು. ಅಲ್ಲದೆ ಇನ್ನಿತರ ಯಾವುದೇ ಪೂಜೆ, ಶಾಂತಿ ಹೋಮಗಳನ್ನು ಮಾಡಿಕೋಡಲಾಗುವದು.**

## Navi Mumbai Kannada Sangha App.

All members are requested to download the app www.navimumbaikannadasangha.com from google site free of cost.

*REG. NO.NMB /27 /2015-17*

*Posted at Vashi MDG P.O. on 20th of every month*

**PRINTED AND PUBLISHED BY**

*Shri. Y.K.RAO on behalf of*

**NAVI MUMBAI KANNADA SANGHA**

*Plot No. 2C/2, Sector 9A, Vashi, Navi Mumbai - 400703.*

*Tel.:* **2765 3443 web: www/navimumbaikannadasangha.com**

**EDITOR: SHRI B. H. KATTI**

*Subscription Rates :*

*Yearly-Rs.20/-, Single Copy-Rs.2/-*

Printed at PIONEER ENTERPRISES, Shop F-3, Sector-5, Vashi, Navi Mumbai.